O.S. ನಂಬರಃ 90/2023

ಪಿ. ಡಬ್ಲ್ಯೂಃ 1

ದಿಃ 28-02-2024 ರಂದು ಸಾಕ್ಷಿಯನ್ನು ಪುನಃ ಕರೆಯಿಸಿ ಪ್ರಮಾಣ ವಚನ ಭೋದಿಸಲಾಯಿತು.

<u>ಪಾಟಿ ಸವಾಲುಃ 1 ನೇ ಪ್ರತಿವಾದಿ ಪರ ಶ್ರೀ ಎಂ.ಎ.ಆರ್. ವಕೀಲರಿಂದಃ</u>

ನಾನು 8 ನೇ ತರಗತಿ ಅಪೂರ್ಣಗೊಳಿಸಿದ್ದೇನೆ. ಸಾಕ್ಷಿ ಪ್ರಮಾಣ ಪತ್ರದಲ್ಲಿ ಏನು ಬರೆದಿದೆ ಎಂದು ಮಾಹಿತಿ ಇದೆ. ಇಂಗ್ಲೀಷ ಓದಲು ಮತ್ತು ಬರೆಯಲು ಬರುವುದಿಲ್ಲ. ದಿಃ 03-03-2023 ರಂದು ಕರಾವಳಿ ಮುಂಜಾವು ಪತ್ರಿಕೆಯಲ್ಲಿ ಪ್ರಕಟಣೆ ಹೊರಡಿಸಿದ್ದೆ ಎಂದರೆ ಸರಿ. ಸದರಿ ಪ್ರಕಟಣೆಯಲ್ಲಿ ಉಸ್ಮಾನ್ ಕಮಾಲ್ ಶೇಖ ಇವರು ಆಸ್ತಿಯನ್ನು 2004 ರಲ್ಲಿ ನನಗೆ ಬರೆದುಕೊಟ್ಟಿರುತ್ತಾರೆಂದು ಬರೆಸಿದ್ದೇನೆ ಎಂದರೆ ಸರಿ. ಉಸ್ಮಾನ್ ಕಮಾಲ್ ಶೇಖ ಬರೆದುಕೊಟ್ಟಿದ್ದಾನೆಂದು ಹೇಳುವ ದಾಖಲೆಯನ್ನು ನ್ಯಾಯಾಲಯಕ್ಕೆ ನೀಡಿದ್ದೇನೆ. ಸದರಿ ದಾಖಲೆ ನನ್ನ ಹೆಸರಿನಲ್ಲಿ ಮಾಡಿದ ಭಕ್ಷಿಸ್ ಪತ್ರ ಇರುತ್ತದೆ. ಸದರಿ ಭಕ್ಷಿಸ್ ಪತ್ರದ ಮೇಲೆ ಆಸ್ತಿ ಉತಾರೆ ನನ್ನ ಹೆಸರಿನಲ್ಲಾಗಿದೆಯೇ ಎಂದರೆ ಆಗಿಲ್ಲ ಎಂದು ಹೇಳುತ್ತಾರೆ. ಭಕ್ಷಿಸನ್ನು ಯಾವ ರೀತಿ ಮಾಡಿರುತ್ತಾರೆಂದು ಈಗ ನೆನಪಿಲ್ಲ. ಸದರಿ ಭಕ್ಷಿಸ್ ಪತ್ರವನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿದ್ದೇನೆ.

ನಾನು ತರಕಾರಿ ವ್ಯಾಪಾರ ಮಾಡಿಕೊಂಡಿರುತ್ತೇನೆ ಎಂದರೆ ಸರಿ. ನಾನು ಅಂಬಾರಕೊಡ್ಲ ರಸ್ತೆಯ ಅಂಚಿನಲ್ಲಿ ತರಕಾರಿ ವ್ಯಾಪಾರ ಮಾಡುತ್ತೇನೆ ಎಂದರೆ ಸಾಕ್ಷಿ

ಅಂಗಡಿಯಿದೆ, ರಸೆಯ ಅಂಚಿನಲ್ಲಲ್ಲ ಎಂದು ಹೇಳುತ್ತಾರೆ. ಮೂಲದಾವೆ ನಂ. 71/2001 ನ್ನು ಅಂಗಡಿ ಮಾಲೀಕರ ವಿರುದ್ಧ ಸಲ್ಲಿಸಿದ್ದೆ. ಸದರಿ ದಾವೆಯಲ್ಲಿ ರಾಜಿ ಮಾಡಿಕೊಂಡಿದ್ದೇವೆ ಎಂದರೆ ಸರಿ. ಇಮಾರತಿಯ ವರಾಂಡೆಯಲ್ಲಿ ಪೂರ್ವ ಪಶ್ಚಿಮ 3–ಅಡಿ, ದಕ್ಷಿಣೋತ್ತರ 5–ಅಡಿ ಜಾಗೆಯಲ್ಲಿ ನಾನು ತರಕಾರಿ ವ್ಯಾಪಾರ ಮಾಡುವುದನ್ನು ಆತಂಕಪಡಿಸಬಾರದೆಂದು ಮೊದಲಿನ ದಾವೆಯಲ್ಲಿ ಮಾಗಣೆ ಮಾಡಿದ್ದೆ ಎಂದರೆ ಸರಿ. ಸದರಿ ಜಾಗೆಗೆ ಪ್ರತಿದಿನ ರೂ.30/– ಕೊಡಬೇಕೆಂದು ಕರಾರು ಮಾಡಿಕೊಂಡಿದ್ದೇವು ಎಂದರೆ ಸರಿ. ನಾನು ತರಕಾರಿ ಮಾರುವ ಸ್ಥಳ ಹೊರತುಪಡಿಸಿ, ಉಳಿದ ಆಸ್ತಿಗೆ ತೊಂದರೆ ಕೊಡಬಾರದೆಂದು ಹಾಗೂ ತರಕಾರಿ ದಾಸ್ತಾನು ಮಾಡಬಾರದೆಂದು ರಾಜಿ ಮಾಡಿಕೊಂಡಿದ್ದೇವು ಎಂದರೆ ಸರಿ.

ಮೂಲದಾವೆ ನಂ. 71/2001 ರಲ್ಲಿ ದಾವಾ ಆಸ್ತಿ ಕುರಿತಾಗಿ ಸರ್ವೇ ನಂ.438 ವಿಸ್ತೀರ್ಣ 20–ಗುಂಟೆಯಲ್ಲಿರುವ ಅಂಗಡಿ ನಂ. 3229 ರ ಅಂಗಡಿ ಮುಂಬದಿಯ ವರಾಂಡೆ ಎಂದು ತೋರಿಸಿದೆ ಎಂದರೆ ಸರಿ, ಆದರೆ ಅದರಲ್ಲಿ ಸರ್ವೇ ನಂಬರ ತಪ್ಪಾಗಿ ನಮೂದಾಗಿದೆ ಎಂದು ಹೇಳುತ್ತಾರೆ. ಪ್ರತಿ ದಿವಸ ನಾನು ರೂ. 30/– ನೀಡುತ್ತಿದ್ದು, ನಂತರದಲ್ಲಿ ಉಸ್ಮಾನ್ ಶೇಖ ಕಮಾಲ್ ರವರು ಹಣದ ಬದಲು ಪ್ರತಿ ದಿವಸ ಊಟ, ತಿಂಡಿ ನೀಡಬೇಕೆಂದು ತಿಳಿಸಿದ ಮೇರೆಗೆ ಊಟ ಹಾಗೂ ತಿಂಡಿ ಮತ್ತು ಚಹಾ, ಬ್ರೇಡ್ ನೀಡುತ್ತಿದ್ದೆ, ಆತನ ಸಂಪೂರ್ಣ ದಿನದ ಕರ್ಮಾಧಿಗಳಿಗೆ ಬೇಕಾದ ಸಹಾಯವನ್ನು, ಬಾವಿಯಿಂದ ನೀರನ್ನು ನಾನೇ ಪೂರೈಸುತ್ತಿದ್ದೆ, ಆತನ ಆಸ್ಪತ್ರೆ ಚಿಕಿತ್ಸೆ ವೆಚ್ಚ ನಾನೇ ನೋಡಿಕೊಳ್ಳುತ್ತಿದ್ದೆ, ಉಳಿದವರೂ ಯಾರೂ ಆತನನ್ನು ನೋಡಿಕೊಂಡಿಲ್ಲ ಎಂದು

ಹೇಳುತ್ತಾರೆ. ಹೊಟೇಲಿನಿಂದ ಊಟ ಸ್ವಲ್ಪ ದಿವಸ ಮಾತ್ರ ನೀಡಿದ್ದು, ನಂತರ ಮನೆಯ ಊಟ ಕೇಳಿದ್ದರಿಂದ ಆತನಿಗೆ ನನ್ನ ಮನೆಯಿಂದ ಊಟ ಪೂರೈಸಿದ್ದೇನೆ ಎಂದು ಹೇಳುತ್ತಾರೆ. ಈ ಕುರಿತು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಕೋರ್ಟ್‌ನಿಂದ ಆದೇಶವಿದೆ ಎಂದು ನಾನು ಆತನಿಗೆ ಹಣನೂ ನೀಡಿಲ್ಲ ಹಾಗೂ ಊಟೋಪಚಾರ ಮತ್ತು ಚಿಕಿತ್ಸೆ ಕೊಡಿಸಿಲ್ಲ ಎಂದರೆ ಸರಿಯಲ್ಲ.

ಉಸ್ಮಾನ್ ಶೇಖ ಈತನಿಗೆ ವಯಸ್ಸಾದ ನಂತರ ಅರಳು ಮರಳು ಇದ್ದಾಗ ಆತನ ಮೇಲೆ ದಾವೆ ಮಾಡಿ ನಂತರ ಅಲ್ಪಸ್ವಲ್ಪ ದಿನಗಳಲ್ಲಿ ಊಟ ನೀಡಿ ಅದನ್ನೇ ಈಗ ಸಾಧಿಸಲು ಹೊರಟಿರುತ್ತೀರಿ ಎಂದರೆ ಸರಿಯಲ್ಲ. ಉಸ್ಮಾನ ಶೇಖನಿಗೆ ಕಣ್ಣು ಕಾಣಿಸುತ್ತಿರಲಿಲ್ಲ ಎಂದರೆ ಸಾಕ್ಷಿ ಅದರ ಚಿಕಿತ್ಸೆಗೆ ಮದ್ರಾಸಿಗೆ ಕರೆದುಕೊಂಡು ಹೋಗಿದ್ದೆ ಎಂದು ಹೇಳುತ್ತಾರೆ. 2 ನೇ ಪ್ರತಿವಾದಿಯ ಅಣ್ಣನಾದ ಮೈನುದ್ದೀನ್ ಹಾಗೂ 1 ನೇ ಪ್ರತಿವಾದಿ ಶೇಖ್ ಉಸ್ಮಾನ್ ಶೇಖ ಕಮಾಲ್ ನನ್ನು ನೋಡಿಕೊಳ್ಳುತ್ತಿದ್ದರು ಎಂದರೆ ಸರಿಯಲ್ಲ. 1 ನೇ ಪ್ರತಿವಾದಿ ಶೇಖ್ ಉಸ್ಮಾನ್ ಶೇಖ ಕಮಾಲ್ ರವರನ್ನು ಎಲ್ಲ ರೀತಿಯಿಂದಲೂ ನೋಡಿಕೊಂಡಿದ್ದಾರೆ ಎಂದರೆ ಸರಿಯಲ್ಲ. ಹಾಜರುಪಡಿಸಿದ ಮೆಡಿಕಲ್ ಚೀಟಿಗಳು ಸೃಷ್ಟಿಸಿದವು ಎಂದರೆ ಸರಿಯಲ್ಲ.

(ಮುಂದುವರೆದ ಪಾಟಿ ಸವಾಲನ್ನು ವಿನಂತಿ ಮೇರೆಗೆ ಮುಂದೂಡಲಾಯಿತು.)

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಮಾಡಲಾಗಿದೆ.)

ಓ ಹೇ ಕೇ ಸರಿ ಇದೆ.

ಸಿವಿಲ್ ನ್ಯಾಯಾಧೀಶರು, ಅಂಕೋಲಾ.